ಕಲಿಯಬೇಕೆಂಬುದು ನಮ್ಮ ಉದ್ದೇಶ. ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಹೇಳಿದಾಗ ಈಗ ಅವರು ಕಾಲೇಜ್ ಎಲ್ಲಿ ಇರಬೇಕೆಂದು ಹೇಳುತ್ತಾರೋ ಅಲ್ಲಿಯೂ ಎನೂ ಇಲ್ಲ, ಒಂದು ಪ್ರೈವೇಟ್ ಬಿಲ್ಡಿಂಗ್ ಇದೆ. ಅದು ಸರಿಯಿಲ್ಲ. ಅಲ್ಲಿ ಬೇರೆ ಜಾಗವು ಇರಲಿಲ್ಲ. ಯು.ಜಿ.ಸಿ. ಹಣ ಲ್ಯಾಪ್ಸ್ ಆಯಿತು. ಈಗ 1 ಕೋಟಿ 23 ಲಕ್ಷ ರೂ. ಗಳು ನಬಾರ್ಡದು ಇದೆ. ಈಗ ಅದು ಹೋಗುತ್ತದೆ. ಇಲ್ಲಿ ಜಾಗ ಕೊಡುತ್ತೇವೆಂದು ಹೇಳಿದರು. ಜಾಗವನ್ನು ಕೊಟ್ಟರು, So we shifted. ಹೀಗಾಗಿ ನಾನೇನು ಹೇಳುತ್ತೇನೆಂದರೆ, ಪುನಃ ನಾನು ಜಿಲ್ಲಾ ಸಚಿವರ ಜೊತೆ ಮಾತನಾಡಿ ಇದಕ್ಕೆ ಏನು ಮಾಡುವುದಕ್ಕೆ ಸಾಧ್ಯವಿದೆ ಆ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಟಿ. ರವಿ: ನೀವು ಅಲ್ಲಿ ಬಿಲ್ಡಿಂಗನ್ನು ಕಟ್ಟಿಲ್ಲ. ಅಲ್ಲಿ 130 ಮಕ್ಕಳು ಒಂದೇ ಕಡೆ ಇದ್ದಾರೆ.

(ಈ ಹಂತದಲ್ಲಿ ಬಾವಿಯಲ್ಲಿ ನಿಂತು ಧರಣಿ ಮಾಡುತ್ತಿದ್ದ ಮಾನ್ಯ ಅಂಗಾರ ಅವರು ತಮ್ಮ ಸ್ಥಾನಕ್ಕೆ ತೆರಳಿದರು).

ii) ವಿಷಯ: ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಬ್ಬಿ, ಸಿ.ಎಸ್.ಪುರ ಯಡಿಯೂರು ಗ್ರಾಮಗಳ ಮಾರ್ಗವಾಗಿ ಮಂಡ್ಯ ನಗರಕ್ಕೆ ಹೋಗುವ ರಸ್ತೆಯು ಕೆ. ಷಿಪ್ ಯೋಜನೆಯಡಿ ಮಂಜೂರಾಗಿದ್ದರೂ ಕಾಮಗಾರಿಯೂ ಪೂರ್ಣಗೊಳ್ಳದಿರುವ ಬಗ್ಗೆ.

ಶ್ರೀ ಎಂ. ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಬ್ಬಿ, ಸಿ.ಎಸ್.ಪುರ ಯಡಿಯೂರು ಗ್ರಾಮಗಳ ಮಾರ್ಗವಾಗಿ ಮಂಡ್ಯ ನಗರಕ್ಕೆ ಹೋಗುವ ರಸ್ತೆಯು ಕೆ. ಷಿಪ್ ಯೋಜನೆಯಡಿ ಮಂಜೂರಾಗಿದ್ದರೂ ಕಾಮಗಾರಿಯು ಪೂರ್ಣಗೊಳ್ಳದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ಸೆಳೆಯುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಲೋಕೋಪಯೋಗಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಕೃಷ್ಣಪ್ಪ ಎಂ. ಟಿ. ಇವರ ನಿಯಮ 73ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ 128, "ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಬ್ಬಿ, ಸಿಎಸ್‌ಪುರ, ಯಡಿಯೂರು ಗ್ರಾಮಗಳ ಮಾರ್ಗವಾಗಿ ಮಂಡ್ಯ ನಗರಕ್ಕೆ ಹೋಗುವ ರಸ್ತೆಯು ಕೆಶಿಪ್ ಯೋಜನೆಯಡಿ ಮಂಜೂರಾಗಿದ್ದು, ಸದರಿ ಕಾಮಗಾರಿಯು ಅತ್ಯಂತ ಕಳಪೆಯದಾಗಿರುವುದರಿಂದ ಕಳೆದ 3 ವರ್ಷಗಳಿಂದ ಸ್ಥಗಿತ ಗೊಂಡಿರುವ ಈ ಕಾಮಗಾರಿಗಳನ್ನು ಯಾವ ಕಂಪನಿಗೆ ನೀಡಲಾಗಿದೆ ಹಾಗೂ ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದೆಂಬುದರ ಸೂಚನಾ ಪತ್ರಕ್ಕೆ ಲೋಕೋಪಯೋಗಿ ಸಚಿವರಿಂದ ಉತ್ತರ.

ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಲೋಕೋಪಯೋಗಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಶಿರಾ–ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿ–84, ರಲ್ಲಿ ಮಂಡ್ಯದಿಂದ ಗುಬ್ಬಿಗೆ ವರೆಗಿನ ಸುಮಾರು 108.62 ಕಿ.ಮೀ. ಉದ್ದದ ರಸ್ತೆಯನ್ನು ADB ಸಾಲದ ನೆರವಿನಡಿ ಅಭಿವೃದ್ಧಿ ಪಡಿಸಲು ಕೆಶಿಪ್–11 ರ ಯೋಜನೆಯಡಿ ಗುತ್ತಿಗೆದಾರರಾದ M/s KMC-VDB (JV) Hydrabad ರವರಿಗೆ ₹196.90 ಕೋಟಿಗಳಿಗೆ ವಹಿಸಿಕೊಡ ಲಾಗಿದೆ. ಈ ಕಾಮಗಾರಿಯನ್ನು ಮಾರ್ಚ 2012 ವಹಿಸಿಕೊಡಲಾಗಿದ್ದು, ಗುತ್ತಿಗೆ ಕರಾರಿನನ್ವಯ 33 ತಿಂಗಳುಗಳ ಕಾಲಾವಧಿಯಲ್ಲಿ ಪೂರ್ಣಗೊಳಿ ಸಬೇಕು.

ಈ ಮಧ್ಯೆ ಗುತ್ತಿಗೆದಾರರು ಕಲ್ಲು ಗಣಿಗಾರಿಕೆಯನ್ನು ಗೊತ್ತುಪಡಿಸಿ ರುವ ಪ್ರದೇಶವು ಮಾರಕೋನಹಳ್ಳಿ ಡ್ಯಾಂಗೆ ಸಮೀಪ ಇರುವುದಾಗಿ ಗಣಿಗಾರಿ ಕೆಯಿಂದ ಡ್ಯಾಂ ಕಟ್ಟಡಕ್ಕೆ ಧಕ್ಕೆ ಉಂಟಾಗಬಹುದೆಂದ ಶಂಕೆಯನ್ನು ವ್ಯಕ್ತ ಪಡಿಸಿ, ಬೆಂಗಳೂರಿನ ವಕೀಲರೊಬ್ಬರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ

ಆಗಸ್ಟ್ 2012ರಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅಡಿಯಲ್ಲಿ ಮೊಕದ್ದಮೆ ಪ್ರಕರಣ ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯ ಪರಿಗಣಿಸಿ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಜಿಲ್ಲಾಧಿಕಾರಿಗಳು, ತುಮಕೂರು ಹಾಗೂ ಗುತ್ತಿಗೆದಾರರಿಗೆ ಪ್ರಸಕ್ತ ವಿಷಯದ ಬಗ್ಗೆ ನೋಟೀಸ್ ಜಾರಿ ಮಾಡಿದೆ. ಸದರಿ ವಿಷಯವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇರುವುದರಿಂದ ಜಿಲ್ಲಾಧಿಕಾರಿಗಳು ಪರವಾನಗಿ ನೀಡಲು ಮುಂದೂಡಿರುತ್ತಾರೆ. ಈ ಮಧ್ಯೆ ಗುತ್ತಿಗೆದಾರರು National Institute of Technology, ಸೂರತ್‌ಕಲ್ ಇಂಜಿನಿಯರಿಂಗ್ ಕಾಲೇಜ್ ಇವರಿಂದ ಅಧ್ಯಯನ ವರದಿಯನ್ನು (Study Report) ಪಡೆದು ಸಲ್ಲಿಸಲು ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಏಪ್ರಿಲ್–2013 ರಲ್ಲಿ ಸೂಚಿಸಿರುತ್ತಾರೆ. ಅದರಂತೆ ಸದರಿ ವರದಿಯನ್ನು ಪಡೆಯಲು ಕ್ರಮ ಕೈಗೊಳ್ಳಲಾಯಿತು.

ಗುಬ್ಬಿ–ಕೌಡ್ಲೆ ಹಾಗೂ ಮದ್ದೂರು–ಹುಲಿಯೂರುದುರ್ಗ ರಸ್ತೆಯಲ್ಲಿನ 4153 ಮರಗಳ ಕಟಾವಣೆ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದೂರು ನೀಡಲಾಗಿದ್ದು, ಇದನ್ನು ಮಾನ್ಯ ಉಚ್ಚ ನ್ಯಾಯಾಲಯವು ತೀವ್ರವಾಗಿ ಪರಿಗಣಿಸಿ ದಿನಾಂಕ: 05.06.2012 ರಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಮೇರೆಗೆ ಯೋಜನಾ ಕಾಮಗಾರಿಗೆ ತಡೆಯಾಜ್ಞೆ ನೀಡಿರುತ್ತದೆ. ಮುಂದುವರೆದು, ದಿನಾಂಕ: 19.08.2013 ರಂದು ಈ ತಡೆಯಾಜ್ಞೆಯನ್ನು ಮಾನ್ಯ ಉಚ್ಚ ನ್ಯಾಯಾಲಯವು ತೆರವುಗೊಳಿಸಿ ಕಾಮಗಾರಿ ಚಾಲನೆಗೆ ಅನುಮತಿ ನೀಡಿರುತ್ತದೆ. ಮೇಲಿನ ಪ್ಯಾರಾದಲ್ಲಿ ನೀಡಿರುವ ವಿವರಣೆಯಂತೆ ಮಾನ್ಯ ಉಚ್ಚನ್ಯಾಯಲಯದ ತಡೆಯಾಜ್ಞೆಯನ್ನು ತೆರವುಗೊಂಡಿರುವುದರಿಂದ ಹಾಗೂ ಭೂಸ್ವಾಧೀನ ಪ್ರಕ್ರಿಯೆಯನ್ನು ಚುರುಕುಗೊಳಿಸಿ ಇನ್ನು ಮುಂದೆ ಕಾಮಗಾರಿಯನ್ನು ಕ್ಷೀಪ್ರ ಗತಿಯಲ್ಲಿ ಸಂಪೂರ್ಣಗೊಳಿಸಲು ಗುತ್ತಿಗೆದಾರರಿಗೆ ತಿಳಿಯಪಡಿಸಲಾಯಿತು.

ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರು ರಸ್ತೆ ನಿರ್ವಹಣೆಯಲ್ಲಿ ವಿಫಲರಾದ್ದರಿಂದ ಈ ನಿರ್ವಹಣಾ ಕಾಮಗಾರಿಯನ್ನು ಸದರಿ ಗುತ್ತಿಗೆದಾರರ Risk & Cost ಆಧಾರದ ಮೇಲೆ ಸ್ಥಳೀಯ

ಗುತ್ತಿಗೆದಾರರ ಮೂಲಕ ರೂ. 42.33 ಲಕ್ಷ ಮೊತ್ತಕ್ಕೆ ನಿರ್ವಹಣಾ ಕಾಮಗಾರಿಯನ್ನು ಆಗಸ್ಟ್–2013 ರಲ್ಲಿ ತೆಗೆದುಕೊಂಡು ನಿರ್ವಹಿಸಲಾಯಿತು. ನಂತರದಲ್ಲಿ ಸದರಿ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿರಬೇಕೆಂದು ಪದೇ ಪದೇ ನಿರ್ವಹಣಾ ಕಾರ್ಯವನ್ನು ಕೈಗೆತ್ತಿ ಕೊಳ್ಳಲು ಗುತ್ತಿಗೆದಾರರಿಗೆ ಸೂಚನೆ ನೀಡಿದಾಗ್ಯೂ, ಗುತ್ತಿಗೆದಾರರು ಅದನ್ನು ಮಾಡದೇ ಇರುವ ಕಾರಣ, ರಸ್ತೆಯು ಸಮಯಾಂತರದಿಂದ, ವಾಹನಗಳ ಸಂಚಾರ ದಟ್ಟಣೆಯಿಂದ, ಗುತ್ತಿಗೆದಾರರ ಅಪೂರ್ಣ ಕಾರ್ಯ ನಿರ್ವಹಣೆ ಹಾಗೂ ಅಗತ್ಯ ದುರಸ್ಥಿ ಇಲ್ಲದ ಕಾರಣ ರಸ್ತೆಯು ಮತ್ತಷ್ಟು ಹಾಳಾದ ಪರಿಣಾಮವಾಗಿ ಮೂಲ ಗುತ್ತಿಗೆದಾರರ risk & cost ಮೇಲೆ ಜೂನ್–2014ರಲ್ಲಿ ಬೇರೆ ಗುತ್ತಿಗೆದಾರರ ಮೂಲಕ ಸುಮಾರು ರೂ. 2.70 ಕೋಟಿಗಳ ಮೊತ್ತದ ಎರಡನೇ ಬಾರಿಯ ದುರಸ್ಥಿ / ನಿರ್ವಹಣೆಯನ್ನು ನಿರ್ವಹಿಸಲಾಗಿದೆ.

ಮುಂದುವರೆದು, M/s. KMC VDB, (JV) Hydrabad, ರವರು ಗುತ್ತಿಗೆ ಕರಾರನ್ನು ಮಾನ್ಯ ಮಾಡದೇ, ಕಾಮಗಾರಿಯನ್ನು ಕರಾರಿನನ್ವಯ ನಿರ್ವಹಿಸಲು ವಿಫಲರಾಗಿರುತ್ತಾರೆ. ಇದರಿಂದ ಸಾರ್ವಜನಿಕರು, ವಾಹನ ಸಂಚಾರಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದು, ಈ ಬಗ್ಗೆ ಮೇಲಿಂದ ಮೇಲೆ ರಸ್ತೆ ತಡೆ ಹಾಗೂ ಪ್ರತಿಭಟನೆಗಳು ವ್ಯಕ್ತವಾಗಿದೆ. ಜನಪ್ರತಿನಿಧಿಗಳು, ಶಾಸಕರು ಹಾಗೂ ಸರ್ಕಾರದ ಅಧಿಕರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿರುತ್ತಾರೆ. ಈ ಅಹಿತಕರ ಪರಿಸ್ಥಿತಿಯನ್ನು ಬಗೆಹರಿಸಲು ಯೋಜನೆಯು ಸದರಿ ಗುತ್ತಿಗೆದಾರರೊಂದಿಗೆ ಆಗಿಂದಾಗ್ಗೆ ಸಮಾಲೋಚನೆ ಸಭೆಗಳನ್ನು ನಡೆಸಿ, ಕಾಮಗಾರಿಯ ಪ್ರಗತಿಯನ್ನು ಸಾಧಿಸುವಂತೆ ಕೋರಿ ಯೋಜನೆಯ ವತಿಯಿಂದ ಅಗತ್ಯವಾಗುವ ಸಹಕಾರವನ್ನು ನೀಡುವ ಭರವಸೆ ಮಾಡಿದಾಗ್ಯೂ, ಗುತ್ತಿಗೆದಾರರು ಅಗತ್ಯ ಪ್ರತಿಕ್ರಿಯೆ ನಿಯೋಜಿಸಿರುವುದಿಲ್ಲ. ಅಗತ್ಯ ನಿರ್ಮಾಣ ಸಂಪನ್ಮೂಲದ ಕೊರತೆಯಿಂದ ಪ್ರಗತಿಯು ಸಂಪೂರ್ಣ ಕುಂಠಿತಗೊಂಡಿದ್ದು, ಋಣಾತ್ಮಕವಾಗಿ ಪರಿಣಮಿಸಿದೆ. ಇದನ್ನು ಸರ್ಕಾರ ಹಾಗೂ ADB ಯು ಆದ್ಯತೆಯಲ್ಲಿ ಪರಿಗಣಿಸಿ, ಗುತ್ತಿಗೆಯು ತನ್ನ ಬದ್ಧತೆ ಯನ್ನು ಕಳೆದುಕೊಂಡಿದೇ ಎಂಬ ಹಿನ್ನೆಲೆಯಲ್ಲಿ, ಹಾಲಿ ಗುತ್ತಿಗೆಯ ಕರಾರನ್ನು

ರದ್ದು ಮಾಡಲು ಪ್ರಸ್ತಾವನೆಯನ್ನು ಕೈಗೆತ್ತಿಕೊಂಡಿದೆ. ಸದರಿ ವಿಷಯವಾಗಿ ADB ರವರ ನಿರಪೇಕ್ಷಣೆಯನ್ನು ಪಡೆಯುವ ಕುರಿತು ಯೋಜನೆಯವತಿಯಿಂದ ಪ್ರಸ್ತಾವನೆಯನ್ನು ದಿನಾಂಕ 21.06.2014 ರಂದು ಕಳುಹಿಸಿಕೊಡಲಾಗಿದೆ. ADB ರವರ ಗುತ್ತಿಗೆ ರದ್ಧತಿಯ ಕುರಿತು ನಿರಪೇಕ್ಷಣೆಯು ಸ್ವೀಕೃತವಾದ ನಂತರ, ಗುತ್ತಿಗೆಯನ್ನು ಕರಾರಿನ ಅಂಶಗಳಡಿ ಯೋಜನೆಯ ವತಿಯಿಂದ ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ತದನಂತರ, ಮರು ಟೆಂಡರ್ ಕರೆಯಲು ಯೋಜಿಸಲಾಗುವುದು.

ಶ್ರೀ ಎಂ. ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಬ್ಬಿ, ಸಿ.ಎಸ್.ಪುರ ಯಡಿಯೂರು ಗ್ರಾಮಗಳ ಮಾರ್ಗವಾಗಿ ಮಂಡ್ಯ ನಗರಕ್ಕೆ ಹೋಗುವ ರಸ್ತೆಯ ಕೆಲಸವನ್ನು ಎಡಿಬಿಯಲ್ಲಿ ಸಾಲ ತೆಗೆದುಕೊಂಡು ಕೆ–ಷಿಪ್ ಪ್ರಾರಂಭ ಮಾಡಿದರು. ಸುಮಾರು ಮೂರು ವರ್ಷಗಳಾಗಿವೆ, ಸರಿಯಾಗಿ ಕೆಲಸ ಮಾಡಿಲ್ಲ, ಅಲ್ಲೊಂದು ಸ್ವಲ್ಪ, ಇಲ್ಲೊಂದು ಸ್ವಲ್ಪ ಮಾಡಿದ್ದಾರೆ. ಇಲ್ಲಿ 2 ಕೋಟಿ 70 ಲಕ್ಷ ರೂಪಾಯಿ ಖರ್ಚು ಮಾಡಿ ರಿಪೇರಿ ಮಾಡಿದ್ದೇವೆಂದು ಹೇಳುತ್ತಾರೆ. ನಮ್ಮ ಜಿಲ್ಲಾ ಮಂತ್ರಿಗಳು ಇಲ್ಲೇ ಇದ್ದಾರೆ. ನಾನು ಅವರಿಗೆ ವಿನಂತಿಸಿಕೊಳ್ಳುವುದೇನೆಂದರೆ ಗುಬ್ಬಿಯಿಂದ ಸಿ. ಎಸ್. ಪುರಕ್ಕೆ ಬಂದು ಹೋಗಲಿ, ಅಲ್ಲಿ ಏನು ರಿಪೇರಿಯಾಗಿದೆ ಎಂದು ನೋಡಿ ಇದು ಕೇವಲ ಬೋಗಸ್ ಆಗಿದೆ. ದಯಮಾಡಿ ಇದಕ್ಕೆ enquiry ಗೆ order ಮಾಡಬೇಕಾಗುತ್ತದೆ. ಯಾರೋ ಆಂಧ್ರದವರಿಗೆ ಕೊಟ್ಟುಬಿಟ್ಟು ನಮಗೆ ರಸ್ತೆಯಾಗದೆ ನಮ್ಮ ಪರಿಸ್ಥಿತಿ ಏನಾಗಬೇಕು? ನೀವು ಎಲ್ಲಾ ತರಹ ಆಂಧ್ರದವರಿಗೆ ಟೆಂಡರ್ ಕೊಡುತ್ತೀರಿ.

ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗಿದ್ದು, ಸ್ಪಷ್ಟವಾದಂತಹ ಉತ್ತರ ಇದೆ. ಎಡಿಬಿಗೆ ಕೊಟ್ಟಿರುವ ಗುತ್ತಿಗೆಯ ರದ್ಧತಿ ಕುರಿತು ನಿರಪೇಕ್ಷಣೆಯು ಸ್ವೀಕೃತವಾದ ನಂತರ ಗುತ್ತಿಗೆಯನ್ನು ಕರಾರಿನ ಅಂಶಗಳಡಿ, ಯೋಜನೆವತಿಯಿಂದ ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ. ಟಿ. ಕೃಷ್ಣಪ್ಪ: 2 ಕೋಟಿ 70 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಲ್ಲ, ಎಲ್ಲಿ ಮಾಡಿದ್ದೀರಿ, ಇದನ್ನು ಯಾವ ರೀತಿಯಲ್ಲಿ ಮಾಡಿದ್ದೀರೆಂದು ಹೇಳಿ.

ಅಧ್ಯಕ್ಷರು: ಅದನ್ನು ತನಿಖೆ ಮಾಡಿಸಿ.

ಶ್ರೀ ಟಿ. ಬಿ. ಜಯಚಂದ್ರ: ಅದರ ಬಗ್ಗೆ ತನಿಖೆಯನ್ನು ಮಾಡಿಸೋಣ ಬಿಡಿ.

ಶ್ರೀ ಎಂ. ಟಿ. ಕೃಷ್ಣಪ್ಪ: ಅಲ್ಲಿ ಕೊನೇ ಪಕ್ಷ ರಿಪೇರಿಯನ್ನಾದರೂ ಮಾಡಿಸಿ. ಜನ ಓಡಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಕೃಷ್ಣಪ್ಪನವರೆ, ಎಲ್ಲಾ ಕಡೆ ಅದೇ ರೀತಿಯಾಗಿದೆ. ನಮ್ಮಲ್ಲಿ ಕೂಡ ಅದೇ ರೀತಿಯಾಗಿದೆ.

ಶ್ರೀ ಎಂ. ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಇವರೇ ಅಲ್ಲಿನ ಜಿಲ್ಲಾ ಮಂತ್ರಿಗಳು.

ಅಧ್ಯಕ್ಷರು: ಅದೇ ಆಂಧ್ರದವರು.

iii) ವಿಷಯ: ಗ್ರಾಮೀಣ ಪ್ರದೇಶದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಿಗೆ ಕಡಿಮೆ ಸೀಟುಗಳನ್ನು ಹಂಚಿಕೆ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ): ಮಾನ್ಯ ಅಧ್ಯಕ್ಷರೆ ಗ್ರಾಮೀಣ ಪ್ರದೇಶದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಬಿ.ಕಾಂ., ತರಗತಿಗಳ ಪ್ರವೇಶಕ್ಕಾಗಿ ವಿದ್ಯಾರ್ಥಿಗಳಿಂದ ಅತೀ ಹೆಚ್ಚಾಗಿ ಅರ್ಜಿಗಳು ಬಂದಿದ್ದು, ಕಾಲೇಜುಗಳಿಗೆ ಕಡಿಮೆ ಸೀಟುಗಳನ್ನು ಹಂಚಿಕೆ ಮಾಡಿರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗಿರುವುದರಿಂದ, ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ವಿದ್ಯಾರ್ಥಿಗಳ ಬೇಡಿಕೆಗೆ ತಕ್ಕಂತೆ ಹೆಚ್ಚು ಸೀಟುಗಳನ್ನು ಮಂಜೂರು ಮಾಡಲು